






# ಶಿಲೆಯಲ್ಲವಿದು..!

■ ವಿದ್ಯಾ ವಿ ಹಾಲಭಾವಿ

**ಗು**ಹೆಯ ಒಳಗೆ ಕಣ್ಣು ಹಾಯಿಸಿದಲ್ಲೆಲ್ಲಾ ಮೈ ಮನಸ್ಸನ್ನು ಮುದಗೊಳಿಸುವ ಅತ್ಯದ್ಭುತ ನೋಟ. ನಿಪುಣ ಕಲಾವಿದನೊಬ್ಬ ಕಣ್ಸೆಳೆಯುವ ಕಲಾಕೃತಿಗಳನ್ನು ಕಡೆದಿಟ್ಟಿರಬಹುದೇನೋ ಎಂದನ್ನಿಸುವಂತಿದೆ. ಇಂತಹ ಮನಮೋಹಕ ಪ್ರಾಕೃತಿಕ ಸೌಂದರ್ಯವುಳ್ಳ ಜೊಂಡು ಕೊಳಲ ಗುಹೆ ಕಾಣಸಿಗುವುದು ಚೀನಾದ ಗ್ವಾಂಕ್ಸಿ ಪ್ರಾಂತ್ಯದ ಬಳಿಯಿರುವ ಗ್ವಿಲಿನ್ ನಗರದಲ್ಲಿ.

ನಗರದ ವಾಯುವ್ಯ ದಿಕ್ಕಿನಲ್ಲಿ 5 ಕಿ.ಮೀ ಗಳಷ್ಟು ದೂರವಿರುವ ಇದು ಪ್ರವಾಸಿಗರ ಅತ್ಯಂತ ಅಚ್ಚುಮೆಚ್ಚಿನ ತಾಣ. 'ಪ್ರಾಕೃತಿಕ ಕಲೆಗಳ ಅರಮನೆ' ಎಂದೇ ಖ್ಯಾತಿಯುಳ್ಳ ಈ ಗುಹೆಯು ಸುಣ್ಣದ ಶಿಲೆಗಳಿಂದ ಮಾಡಲ್ಪಟ್ಟಿದೆ. ಸುಮಾರು 1200 ವರ್ಷಗಳಿಗೂ ಹೆಚ್ಚು ಹಳೆಯದಾದ ಈ ಗುಹೆಯು ಆಗಿನ ಕಾಲದಿಂದಲೂ ಗ್ವಿಲಿನ್ ನಗರದ ಆಕರ್ಷಣೆಯ ಕೇಂದ್ರ. ಹಿಂದೆ ಈ ಗುಹೆಯ ಹೊರಗೆ ಬೆಳೆಯುವ ಒಂದು ವಿಧವಾದ ಜೊಂಡು ಸಸ್ಯದಿಂದ ಕೊಳಲುಗಳನ್ನು ತಯಾರಿಸುತ್ತಿದ್ದರಂತೆ. ಅದಕ್ಕಾಗಿಯೇ ಇದಕ್ಕೆ 'ಜೊಂಡು ಕೊಳಲ ಗುಹೆ' (ರೀಡ್ ಫ್ಲೂಟ್ ಕೇವ್) ಎಂಬ ಹೆಸರು ಬಂದಿದೆ.

ಒಳಗಡೆ ಗುಹೆಯ ಮೇಲ್ಭಾಗದಲ್ಲಿ ಹನಿ ಹನಿಯಾಗಿ ಜಿನುಗುವ ನೀರಿನಿಂದಾದ ಸುಣ್ಣದ ಅಂಶ ಹಾಗೂ ನೆಲದ ಮೇಲೆ ಬಿದ್ದು ಸಂಗ್ರಹವಾದ ಸುಣ್ಣದ ಅಂಶವು ಚಿತ್ರ ವಿಚಿತ್ರ ಬಂಡೆ ಕಲ್ಲುಗಳ ಅಕಾರದಲ್ಲಿ ರೂಪುಗೊಂಡು ನೋಡುಗರ ಕುತೂಹಲವನ್ನು ಹೆಚ್ಚಿಸುತ್ತವೆ. ಗುಹೆಯ ಒಳಗಡೆ ಅಳವಡಿಸಿದ ಬಣ್ಣ ಬಣ್ಣದ ದೀಪಗಳ ಬೆಳಕಿನಿಂದ ಗುಹೆಯ ಸೊಬಗು ಇನ್ನಷ್ಟು ಹೆಚ್ಚಿದೆ.

(8ನೇ ಪುಟ ನೋಡಿ)